ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ15 ಚಾ ಸಾ 18

ಹೆಸರುಃ ಅಖೀಬ್ ಜಾವಿದ್

ತಂದೆಯ ಹೆಸರುಃ ಮೊಹಮದ್ ಸಲೀಂ

ವಯಸ್ಸುಃ 31 ವರ್ಷ

ಉದ್ಯೋಗಃ ಕಿರಿಯ ಅಭಿಯಂತರರು , ಜಲಸಂಪನ್ಮೂಲ ಇಲಾಖೆ

ವಾಸಃ ಕೆ ಆರ್ ಸಾಗರ .

ಸಾಕ್ಷಿಯನ್ನು ದಿಃ 09.02.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ದಿಃ 11.2.22 ರಂದು ನಮ್ಮ ಮೇಲಧಿಕಾರಿಗಳಾದ ಎ ಇ ಇ ರವರು ಕೆ ಆರ್ ಸಾಗರದಲ್ಲಿ ಕೊಲೆ ಕೇಸು ಆಗಿದೆ , ನೀವು ಮತ್ತು ಶಿವಕುಮಾರ್ ಪಂಚಸಾಕ್ಷಿಗಳಾಗಿ ಪೊಲೀಸ್ ಠಾಣೆಗೆ ಹೋಗಬೇಕು ಎಂದು ತಿಳಿಸಿರುತ್ತಾರೆ .

2. ಅದರಂತೆ ನಾನು ಮತ್ತು ಶಿವಕುಮಾರ್ ದಿಃ

11.2.22 ರಂದು ಕೆ ಆರ್ ಸಾಗರ ಪೊಲೀಸ್ ಠಾಣೆಗೆ ಮದ್ಯಾಹ್ನ 2-3 ಗಂಟೆಗೆ ಹೋಗಿರುತ್ತೇವೆ . ಅಲ್ಲಿದ್ದ ಇನ್ಸ್ ಪೆಕ್ಟರ್ ಪುನಿತ್ ರವರು ಲೊಕೇಷನ್ ಗೆ ವಿಸಿಟ್ ಮಾಡಬೇಕೆಂದು ತಿಳಿಸಿದರು.

3. ಆರೋಪಿ ಲಕ್ಷ್ಮಿ ಒಬ್ಬ ಹೆಂಗಸು ಮತ್ತು 4 ಜನ ಮಕ್ಕಳನ್ನು ಕೆ ಆರ್ ಎಸ್ ನ ಬಜಾರ್ ಲೈನ್ ಮನೆಯಲ್ಲಿ ಕೊಲೆ ಮಾಡಿದ್ದಾಳೆ . ಈ ಸಂಬಂಧವಾಗಿ ಸಿ ಸಿ ಕ್ಯಾಮೆರಾದ ದೃಶ್ಯಾವಳಿಯನ್ನು ಪರಿಶೀಲಿಸಬೇಕೆಂದು ನಮ್ಮನ್ನು ಬಜಾರ್ ಲೈನ್ ನಲ್ಲಿರುವ ರಾಜುರವರ ಮನೆಗೆ ಕರೆದುಕೊಂಡು ಹೋಗಿರುತ್ತಾರೆ , ಅಲ್ಲಿ ಆ ಮನೆಗೆ ಸಿ ಸಿ ಕ್ಯಾಮೆರವನ್ನು ಅಳವಡಿಸಲಾಗಿತ್ತು.

4. ಆ ಮನೆಯಲ್ಲಿ ರಾಜು , ಆತನ ತಾಯಿ ಮತ್ತು ಮನೆಯ ಸದಸ್ಯರು ಇದ್ದರು. ಆ ಮನೆಗೆ ಸಿ ಸಿ ಕ್ಯಾಮೆರಾವನ್ನು ಅಳವಡಿಸಿದ್ದ ಸಂಬಂಧವಾಗಿ ಪೊಲೀಸರು ರಾಜುವನ್ನು ವಿಚಾರಣೆ ಮಾಡಿದರು . ಆನಂತರ ರಾಜುರವರು ನಮ್ಮನ್ನು ಆ ಮನೆಯ ಮೊದಲನೇ ಮಹಡಿಗೆ ಕರೆದುಕೊಂಡು ಹೋದರು , ಆ ಮನೆಯಲ್ಲಿ ಎಲ್ ಇ ಡಿ ಸ್ಕ್ರೀನ್ ಮತ್ತು ಡ್ರೈವ್ ಇತ್ತು. ನಮ್ಮಜೊತೆಯಲ್ಲಿ ಟೆಕ್ನೀಷಿಯನ್ ಕೂಡ ಆ ಮನೆಗೆ

ಬಂದಿದ್ದರು .

5. ಅಲ್ಲಿ 4 ಚಾನಲ್ ಕ್ಯಾಮೆರಾ ಇತ್ತು , ಅದರಲ್ಲಿ 3 ಚಾನಲ್ ಸುಸ್ಥಿತಿಯಲ್ಲಿತ್ತು . ಅವುಗಳ ಪೈಕಿ ಎರಡನೇ ಕ್ಯಾಮೆರಾದಲ್ಲಿ ದೃಶ್ಯಾವಳಿಗಳ ಲಭ್ಯತೆ ದಾಖಲುಗೊಂಡಿತ್ತು. ನಾವು ನೋಡಿದಾಗ ಡ್ಯುರೇಷನ್ 5.2 – 5.3 ಎ. ಎಂ . ರೀತಿ ಇತ್ತು. ಒಬ್ಬ ಹೆಂಗಸು ಆರೆಂಜ್ ಮತ್ತು ಕೆಂಪು ಬಣ್ಣದ ಸೀರೆ ಧರಿಸಿಕೊಂಡು ಕೈಯಲ್ಲಿ ಒಂದು ಬ್ಯಾಗ್ ಅನ್ನು ಹಿಡಿದುಕೊಂಡು ಅರಳಿಕಟ್ಟೆಯ ಕಡೆ ಹೋಗುತ್ತಿರುವ ದೃಶ್ಯಾವಳಿ ಕಂಡು ಬಂತು . ನಮ್ಮ ಜೊತೆಯಲ್ಲಿ ಗಂಗಾರಾಮ್ ಎನ್ನುವ ವ್ಯಕ್ತಿ ಇದ್ದರು. ಅವರು ಆ ದೃಶ್ಯಾವಳಿಯನ್ನು ನೋಡಿಕೊಂಡು ಆ ರೀತಿ ನಡೆದುಕೊಂಡು ಹೋಗುತ್ತಿರುವ ಹೆಂಗಸು ಲಕ್ಷ್ಮೀ ಎಂದು ತಿಳಿಸಿದರು.

6. ಆ ರೀತಿ 5.2 -5.3 ವರೆಗೆ ಇದ್ದ ದೃಶ್ಯಾವಳಿಯನ್ನು ಒಂದು ಪೆನ್ ಡ್ರೈವ್ ನಲ್ಲಿ ಶೇಖರಿಸಿಕೊಂಡಿದ್ದರು .ಸದರಿ ಪೆನ್ ಡ್ರೈವ್ ಅನ್ನು ಈಗ ನೋಡಿದ ನಿಪಿ 5 ಆಗಿದೆ . ಆ ರೀತಿ ದೃಶ್ಯಾವಳಿಯನ್ನು ಶೇಖರಿಸಿಕೊಂಡ ಸಂದರ್ಭದಲ್ಲಿ ನಿಪಿ 4 ರಂತೆ ಪಂಚನಾಮೆ ಮಾಡಿದ್ದಾರೆ, ಅದಕ್ಕೆ ನಾನು ನಿಪಿ 4 ಬಿ ರಂತೆ ರುಜು ಮಾಡಿದ್ದೇನೆ ,

ನನ್ನ ಜೊತೆಯಲ್ಲಿ ಶಿವಕುಮಾರ್ ಕೂಡ ರುಜು ಮಾಡಿದ್ದಾರೆ . ಆ ಮಹಜರಿಗೆ ಗಂಗಾರಾಮ್ ಕೂಡ ರುಜು ಮಾಡಿದ್ದಾರೆ.ಆ ಸಂದರ್ಭದಲ್ಲಿ ನಿಪಿ 6ರಂತೆ 4 ಪೊಟೋಗಳನ್ನು ತೆಗೆದಿರುತ್ತಾರೆ.

7.ಅದಾದ ನಂತರ ನಮ್ಮನ್ನು ಕೆ ಆರ್ ಸಾಗರ ಬೃಂದಾವನ ಗಾರ್ಡನ್ ನಲ್ಲಿ ಇರುವ ಡ್ಯಾಂ ಸೆಕ್ಯುರಿಟಿ ಗೆ ಅಳವಡಿಸಿರುವ ಸಿ ಸಿ ಟಿ ವಿ ಗಳ ಮಾನಿಟರಿಂಗ್ ರೂಂ ಗೆ ಕರೆದುಕೊಂಡು ಹೋದರು. ಅಲ್ಲಿಯೂ ಕೂಡ ಲಕ್ಷ್ಮಿಯ ಕೊಲೆ ಕೇಸಿಗೆ ಸಂಬಂಧಪಟ್ಟಂತೆ ದೃಶ್ಯಾವಳಿಗಳು ಇದ್ದವು.

8. ಕ್ಯಾಮೆರಾ 6 ಮತ್ತು 22ನ್ನು ಪರಿಶೀಲಿಸಿದಾಗ ಕ್ಯಾಮೆರಾ 6 ರಲ್ಲಿ - ಹೊಂಗಳ್ಳಿ ಕಡೆಯಿಂದ ಅರಳಿಕಟ್ಟೆ ಕಡೆಗೆ ಒಬ್ಬ ಹೆಂಗಸು ನಡೆದುಕೊಂಡು ಬರುತ್ತಿರುವ ದೃಶ್ಯ ಇತ್ತು . ಅದರ ಅವಧಿ 5.34-5.35 ಆಗಿತ್ತು .

9. ಕ್ಯಾಮೆರಾ 22- ನ್ನು ಪರಿಶೀಲಿಸಿದಾಗ ಡುರೇಷನ್ 5.36-5.43 ವರೆಗೆ ಪರಿಶೀಲಿಸಿದಾಗ ನಾರ್ಥ ಬ್ಯಾಂಕ್ ಕಡೆಯಿಂದ ಬಂದ ಬಸ್ಸಿಗೆ ಆ ಹೆಂಗಸು ಹತ್ತಿದ

ದೃಶ್ಯಾವಳಿ ಕಂಡುಬಂತು .

10. ಆ ರೀತಿ ನೋಡಿದ ದೃಶ್ಯಾವಳಿಯನ್ನು 32 ಜಿ ಬಿ ಯ ಪೆನ್ ಡ್ರೈವ್ ನಲ್ಲಿ ಸಂಗ್ರಹಿಸಲಾಗಿತ್ತು. ಸದರಿ ಪೆನ್ ಡ್ರೈವ್ ಅನ್ನು ಈಗ ನೋಡಿದೆ.

11. ಆ ಸಂದರ್ಭದಲ್ಲಿ ಪೊಲೀಸರು ಮಾಡಿದ ನಿಪಿ 26 ಪಂಚನಾಮೆಗೆ ನಿಪಿ 26ಎ ರಂತೆ ರುಜು ಮಾಡಿದ್ದೇನೆ. ಆ ರೀತಿ ದೃಶ್ಯಾವಳಿಯನ್ನು ಸಂಗ್ರಹಿಸಿಕೊಂಡ ಪೆನ್ ಡ್ರೈವ್ ಈಗ ನೋಡಿದ ನಿಪಿ 27 ಆಗಿದೆ .

12. ಸದರಿ ಪ್ರಕ್ರಿಯೆಯನು ಮಾಡುವಾಗ 4 ಫೋಟೊಗಳನ್ನು ನಿಪಿ 28ರಂತೆ ತೆಗೆಯಲಾಗಿದೆ .

13. ಕೆ ಆರ್ ಸಾಗರ ಡ್ಯಾಂ ಗೆ ಅಳವಡಿಸಲಾದ ಸಿ ಸಿ ಕ್ಯಾಮೆರಾದಲ್ಲಿದ್ದ ದೃಶ್ಯಾವಳಿಯಲ್ಲಿದ್ದ ಹೆಂಗಸನ್ನು ಗುರುತಿಸಲು ಸಾಧ್ಯವಾಗಿಲ್ಲ, ಏಕೆಂದರೆ ಕ್ಲಾರಿಟಿ ಇರಲಿಲ್ಲ.

14. ರಾಜುರವರ ಮನೆಗೆ ಅಳವಡಿಸಲಾಗಿದ್ದ ಸಿ ಸಿ ಕ್ಯಾಮೆರಾದ ದೃಶ್ಯಾವಳಿಯಲ್ಲಿದ್ದ ಹೆಂಗಸನ್ನು ಮತ್ತು

ಈಗ ನೋಡುತ್ತಿರುವ ಆರೋಪಿಯನ್ನು ನೋಡಿಕೊಂಡು ಇಬ್ಬರು ಹೆಂಗಸರು ಒಬ್ಬರೇ ಎಂದು ಗುರುತಿಸಲು ನನ್ನಿಂದ ಸಾಧ್ಯವಿಲ್ಲ.

ಪಾಟೀ ಸವಾಲು ಮುಂದೂಡಿದೆ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)

ದಿಃ 18.3.24 ರಂದು ಸಾಕ್ಷಿ ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ಆರೋಪಿಗಳ ಪರವಾಗಿಃ ಶ್ರೀ ಎಸ್ ಆರ್ ಎಸ್ ವಕೀಲರಿಂದಃ

15.ದಿಃ 11.2.22 ರಂದು ನನಗೆ ಮತ್ತು ಶಿವಕುಮಾರ್ ರವರಿಗೆ ನಮ್ಮ ಮೇಲಧಿಕಾರಿಗಳು ಪೊಲೀಸ್ ಠಾಣೆಗೆ ಹೋಗಲು ನಮಗೆ ಮೌಖಿಕ ಆದೇಶವನ್ನು ಕೊಟ್ಟಿರುತ್ತಾರೆ.

16.ನಮ್ಮ ಕಚೇರಿಯಿಂದ ಕರ್ತವ್ಯದ ಅವಧಿಯಲ್ಲಿ ಹೊರಗೆ ಹೋಗಬೇಕಾದರೆ ಚಲನ ವಲನ ವಹಿಯಲ್ಲಿ ನಮೂದಿಸಬೇಕೆನ್ನುವುದು ಸರಿ . ಆ ರೀತಿ ಪಂಚನಾಗಿ ಕಚೇರಿಯಿಂದ ಹೊರ ಹೋಗುವ ಸಂದರ್ಭದಲ್ಲಿ ಸದರಿ ವಹಿಯಲ್ಲಿ ನಮೂದಿಸಿಲ್ಲ. ಆ ರೀತಿ ನಮೂದು ಮಾಡಿ ಹೋಗಲು ತೊಂದರೆ ಇರಲಿಲ್ಲ , ಆದರೆ ತುರ್ತಾಗಿ ಕರೆದ ಕಾರಣಕ್ಕಾಗಿ ನಮೂದು ಮಾಡದೇ ಹೋಗಿದ್ದೇನೆ. ಆ ರೀತಿ ಚಲನ ವಲನ ವಹಿಯಲ್ಲಿ ನಮೂದು ಮಾಡಲು ನಮಗೆ 3 ನಿಮಿಷ ಸಾಕಾಗಿತ್ತು.

17. ನಮ್ಮ ಕಚೇರಿಯಿಂದ ಕೆ ಆರ್ ಸಾಗರ ಪೊಲೀಸ್

ಠಾಣೆಗೆ ಅಂದಾಜು 500 ಮೀಟರ್ ದೂರ .

18. ದಿಃ 11.2.22 ರಂದು ಅಂತಹ ಪ್ರಕ್ರಿಯೇ ನಡೆಯದೇ ಇರುವ ಕಾರಣಕ್ಕಾಗಿಯೇ ನಾನು ಕಚೇರಿಯಿಂದ ಹೊರಗೆ ಹೋಗುವ ವಿಚಾರವನ್ನು ಸದರಿ ಚಲನ ವಲನ ವಹಿಯಲ್ಲಿ ನಮೂದಿಸಿಲ್ಲ ಎನ್ನುವುದು ಸರಿಯಲ್ಲ.

19. ಆ ರೀತಿ ನಾವು ಕಚೇರಿಯಿಂದ ಹೋದ ನಂತರ 15 ನಿಮಿಷಗಳ ಕಾಲ ಪೊಲೀಸ್ ಠಾಣೆಯಲ್ಲಿ ಇದ್ದೆವು. ಆ ರೀತಿ ನಾವು ಪೊಲೀಸ್ ಠಾಣೆಗೆ ಹೋದಾಗ ಪ್ರಕರಣದ ವಿದ್ಯಾಮಾನಗಳನ್ನು ಡಿ ವೈ ಎಸ್ ಪಿ ರವರು ನಮಗೆ ವಿವರಿಸಿದರು.

20. ಪ್ರಕರಣದ ವಿದ್ಯಮಾನಗಳನ್ನು ಡಿ ವೈ ಎಸ್ ಪಿ ರವರು ನಮಗೆ ವಿವರಿಸಿದರು ಎಂದು ನಾನು ಈ ಹಿಂದೆ ಬೇರೆ ಎಲ್ಲೂ ತಿಳಿಸಿಲ್ಲ.

21. ಪೊಲೀಸ್ ಠಾಣೆಯಿಂದ ರಾಜುರವರ ಮನೆಗೆ ಅಂದಾಜು ಒಂದು ಕಿ ಮೀ ದೂರ. ಆ ಸ್ಥಳಕ್ಕೆ ನಾವು ಪೊಲೀಸ್ ಠಾಣೆಯಿಂದ ನಮ್ಮ ಸ್ವಂತ ವಾಹನದಲ್ಲಿ

ಹೋಗಿದೇವೆ. ರಾಜುರವರ ಮನೆಗೆ ತಲುಪಿದಾಗ ಮದ್ಯಾಹ್ನದ 3 ಗಂಟೆಯಾಗಿತ್ತು. ನನ್ನ ಜೊತೆಯಲ್ಲಿ ನನ್ನ ಸಹೋದ್ಯೋಗಿ ಶಿವಕುಮಾರ್, ಸಿ ಸಿ ಟಿ ವಿ ಟೆಕ್ನೀಷಿಯನ್,ಪೊಲೀಸ್ ನಿರೀಕ್ಷಕರು ಮತ್ತು ಗಂಗಾರಾಮ್ ಎನ್ನುವವರು ಸ್ಥಳದಲ್ಲಿದ್ದರು.

22.ನಾವು ಹೋದಾಗ ಗಂಗಾರಾಮ್‌ರವರು ಠಾಣೆಯಲ್ಲಿ ಇರಲಿಲ್ಲ, ಬದಲಾಗಿ ರಾಜುರವರ ಮನೆಗೆ ಹೋದಾಗ ಅಲ್ಲಿ ಇದ್ದರು.

23.ರಾಜುರವರ ಮನೆಯ ಹೊರಭಾಗದಲ್ಲಿ ಎರಡು ಸಿಸಿ ಕ್ಯಾಮೆರಾಗಳನ್ನು ಹೊಂಗಳ್ಳಿ ಕಡೆಗಾದಂತೆ ಮತ್ತು ಮತ್ತು ಅರಳಿಕಟ್ಟೆಯ ಕಡೆಗಾದಂತೆ ಅಳವಡಿಸಲಾಗಿತ್ತು. ಆ ಮನೆಗೆ ಅಳವಡಿಸಲಾದ ಸಿ ಸಿ ಕ್ಯಾಮೆರಾಕ್ಕೆ ಸಂಬಂಧಪಟ್ಟಂತೆ ಒಟ್ಟು 4 ಚಾನಲ್‌ಗಳಿದ್ದವು, ಅವುಗಳ ಪೈಕಿ ಮೂರು ಚಾನಲ್ ಗಳು ಕಾರ್ಯನಿರ್ವಹಿಸುತ್ತಿದ್ದವು. ನಾವು ಕ್ಯಾಮೆರಾ - 2ನ್ನು ನೋಡಿದ್ದೇವೆ.

24.ಮನೆಯ ಹೊರಭಾಗದಲ್ಲಿ ಎರಡು ಕ್ಯಾಮೆರಾಗಳನ್ನು ಅಳವಡಿಸಿದ್ದು ಬಿಟ್ಟರೆ ಬೇರೆ ಕ್ಯಾಮೆರಾಗಳನ್ನು ನಾನು ನೋಡಿಲ್ಲ.

25. ನಮ್ಮ ಜೊತೆಯಲ್ಲಿ ಬಂದಿದ್ದ ಸಿ ಸಿ ಕ್ಯಾಮೆರಾದ ಟೆಕ್ನಿಷಿಯನ್ ಸಿಸಿಕ್ಯಾಮೆರಾದ ಡ್ರೈವ್ ಅನ್ನು ಪರಿಶೀಲನೆ ಮಾಡಿದ್ದಾರೆ. ಯಾವ ದಿನದಿಂದ ಯಾವ ದಿನದವರೆಗೆ ಬ್ಯಾಕ್ ಅಪ್ ದಾಖಲುಗೊಂಡಿತ್ತು ಎಂಬುದನ್ನು ನಾನು ನೋಡಿಲ್ಲ. ಯಾವ ದಿನದಿಂದ ಯಾವ ದಿನದವರೆಗೆ ದೃಶ್ಯಾವಳಿಗಳನ್ನು ನೀವು ವೀಕ್ಷಣೆ ಮಾಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನಿಖರವಾಗಿ ಘಟನೆಗೆ ಸಂಬಂಧಪಟ್ಟ ದೃಶ್ಯಾವಳಿಗಳನ್ನು ಮಾತ್ರ ನೋಡಿದ್ದೇನೆ ಎಂದು ಉತ್ತರಿಸಿದ್ದಾರೆ.

26.ವಾಸ್ತವಿಕ ಸಮಯದ ಬಗ್ಗೆ ಮತ್ತು ದೃಶ್ಯಾವಳಿಯಲ್ಲಿ ಇದ್ದ ಸಮಯದ ನಡುವೆ ಇದ್ದ ವ್ಯತ್ಯಾಸವನ್ನು ಪೊಲೀಸರು ಗಮನಿಸಿದ್ದಾರೆ.ಅಲ್ಲಿ ವ್ಯತ್ಯಾಸಗಳಿದುದನ್ನು ನಾನು ಗಮನಿಸಿಲ್ಲ. ವ್ಯತ್ಯಾಸಗಳು ಇತ್ತೋ ಇಲ್ಲವೋ ಎಂಬ ಕುರಿತು ನಾನು ಹೇಳಿಕೆಯನ್ನು ಕೊಟ್ಟಿಲ್ಲ.

27. ಆ ಹೆಂಗಸು ಹಿಡಿದುಕೊಂಡಿದ್ದ ಬ್ಯಾಗ್ ನ ಬಣ್ಣವನ್ನು ನಾನು ಗಮನಿಸಿಲ್ಲ. ಹೆಂಗಸು ಬ್ಯಾಗ್ ಅನ್ನು ಹಿಡಿದುಕೊಂಡು ಹೋಗುತ್ತಿದ್ದ ರೀತಿಯಲ್ಲಿ ಕಂಡುಬಂತು ಆದರೆ ಅಷ್ಟೊಂದು ಸ್ಪಷ್ಟತೆ ಇರಲಿಲ್ಲ.

28.ಹೆಂಗಸು ಬ್ಯಾಗ್ ಅನ್ನು ತೆಗೆದುಕೊಂಡು ಹೋಗುತ್ತಿದ್ದಳು ಎಂಬ ಸಂಬಂಧವಾಗಿ ನಾನು ಹೇಳಿಕೆ ಕೊಟ್ಟಿಲ್ಲ.

29. ಆ ಪೆನ್ ಡ್ರೈವ್ ಬ್ಲಾಂಕ್ ಇದೆ ಎಂದು ನನಗೆ ತೋರಿಸಿದ್ದಾರೆ. ಆ ಪೆನ್ ಡ್ರೈವ್ San disk ಕಂಪನಿಗೆ ಸೇರಿದ್ದಾಗಿದ್ದು ಅದು 32 ಜಿ ಬಿ ಯದ್ದಾಗಿತ್ತು. ಆ ಪೆನ್ ಡ್ರೈವ್ ಅನ್ನು ಯಾರು, ಎಲ್ಲಿಂದ ತಂದಿದ್ದಾರೆ ಎಂದು ನಾನು ವಿಚಾರಿಸಿಲ್ಲ. San disk ಪೆನ್ ಡ್ರೈವ್ ನಲ್ಲಿ ಯಾವುದೇ ವಿಶೇಷತೆ ಇರಲಿಲ್ಲ. ಅಂತಹ ಪೆನ್ ಡ್ರೈವ್ ಗಳು ಮಾರುಕಟ್ಟೆಯಲ್ಲಿ ದೊರೆಯುತ್ತವೆ.

30. ನಾನು ಯಾವುದೇ ರೀತಿಯ ದೃಶ್ಯಾವಳಿಗಳನ್ನು ನೋಡಿಲ್ಲ ಎನ್ನುವುದು ಸರಿಯಲ್ಲ. ದೃಶ್ಯಾವಳಿಗಳನ್ನು ನಿಪಿ 5ರ ಪೆನ್ ಡ್ರೈವ್ ಅಲ್ಲಿ ಶೇಖರಿಸಿಕೊಂಡಿದ್ದಾರೆ ಮತ್ತು ಆ ಸಂದರ್ಭದಲ್ಲಿ ನಿಪಿ 4 ರಂತೆ ಪಂಚನಾಮೆ ಮಾಡಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

31.ನಿಪಿ 6 ಪೋಟೋದಲ್ಲಿ ಗಂಗಾರಾಮ್

ಕಂಡುಬರುತ್ತಿಲ್ಲ. ಫೋಟೋ ತೆಗೆದಾಗ ಗಂಗಾರಾಮ್ ಎಲ್ಲಿದ್ದ ಎಂದು ನಾನು ಗಮನಿಸಿಲ್ಲ.ಗಂಗಾರಾಮ್ ದೃಶ್ಯಾವಳಿಯಲ್ಲಿದ್ದ ಹೆಂಗಸನ್ನು ಗುರುತಿಸಿದ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

32.ರಾಜುವಿನ ಮನೆಯಲ್ಲಿ ಪ್ರಕ್ರೀಯೆ ಮುಗಿಯುವಾಗ ಸಂಜೆ 4 ಗಂಟೆಯಾಗಿತ್ತು. ಆನಂತರ ನಾವು ಕೆ ಎಸ್ ಐ ಎಸ್ ಎಫ್ ಸೆಕ್ಯುರಿಟಿಗೆ ಸಂಬಂಧಪಟ್ಟ ಕಚೇರಿಗೆ ಹೋಗಿದ್ದೇವೆ. ರಾಜುವಿನ ಮನೆಯಿಂದ ಆ ಕಚೇರಿಗೆ 1 ವರೆ ಕಿ ಮೀ ದೂರ. ಆದರೆ ರಾಜುವಿನ ಮನೆಯಿಂದ ಆ ಜಾಗ ಯಾವ ದಿಕ್ಕಿಗೆ ಇದೆ ಎಂದರೆ ದಿಕ್ಕು ಗೊತ್ತಾಗುವುದಿಲ್ಲ.ನಮ್ಮ ಕಚೇರಿಯಿಂದ ಸದರಿ ಸೆಕ್ಯುರಿಟಿ ಕಚೇರಿಗೆ 300 ಮೀಟರ್ ದೂರ. ಪೊಲೀಸ್ ಠಾಣೆಯಿಂದ ಅಂದಾಜು 500 ಮೀಟರ್ ದೂರ.

33. ಬೃಂದಾವನ ಗಾರ್ಡ್ ನಲ್ಲಿರುವ ಕೆ ಎಸ್ ಐ ಎಸ್ ಎಫ್ ನ ಕಚೇರಿ ನಮ್ಮ ಕಚೇರಿಗೆ ಹತ್ತಿರದಲ್ಲಿದೆ. ಸಾಮಾನ್ಯವಾಗಿ ನಾನು ಆ ಕಚೇರಿಗೆ ಹೋಗಿ ಬಂದು ಮಾಡುತ್ತೇನೆ ಎನ್ನುವುದು ಸರಿಯಲ್ಲ ಆದರೆ ಕೆಲಸ ಇದ್ದರೆ ಹೋಗಿ ಬಂದು ಮಾಡುತ್ತೇನೆ.

34. ಕೆ ಎಸ್ ಐ ಎಸ್ ಎಫ್ ನ ಮಾನಿಟರಿಂಗ್ ಕಚೇರಿಗೆ ಹೋದಾಗ ಸಂಜೆ 4.20 ಗಂಟೆಯಾಗಿತ್ತು. ಅರಳಿಕಟ್ಟೆ ಬಸ್‌ನಿಲ್ದಾಣದಿಂದ ಆ ಕಚೇರಿಗೆ ಅಂದಾಜು 700 ಮೀಟರ್ ಅಂತರ. ನಾವು ಅಲ್ಲಿಗೆ ಹೋದಾಗ ಕೆ ಎಸ್ ಐ ಎಸ್ ಎಫ್ ನ ಸಿಬ್ಬಂದಿ ಇದ್ದರು.ಅವರು ಪೊಲೀಸ್ ಪೇದೆಯಾಗಿದ್ದರು. ಹೆಸರು ಗೊತ್ತಿಲ್ಲ. ನಾವು ಆ ಕಚೇರಿಗೆ ಬರುವ ವಿಚಾರವನ್ನು ಸದರಿ ಪೇದೆಗೆ ಮೊದಲೇ ತಿಳಿಸಿರಲಿಲ್ಲ.

35. ನಾವು ಅಲ್ಲಿ ಪರಿಶೀಲಿಸಿದಾಗ ಸಿ ಸಿ ಕ್ಯಾಮೆರಾದ 13 ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿದ್ದವು, 11 ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿರಲಿಲ್ಲ. 13 ಕ್ಯಾಮೆರಾಗಳು ಯಾವ ಯಾವ ದಿಕ್ಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದವು ಎಂದು ನಾನು ಗಮನಿಸಿಲ್ಲ. ಆ ರೀತಿ 700 ಮೀಟರ್ ಅಂತರದ ದೃಶ್ಯಾವಳಿಯನ್ನು ಗ್ರಹಿಸುವ ಸಾಮರ್ಥ್ಯ ಇತ್ತೇ ಎನ್ನುವುದು ನನಗೆ ಗೊತ್ತಿಲ್ಲ, ಆದರೆ ದೃಶ್ಯಾವಳಿಯನ್ನು ತೋರಿಸಿದ್ದಾರೆ. ಕ್ಯಾಮೆರಾ 22ರಲ್ಲಿ ಬಸ್ಸಿನ ಕುರಿತು ದೃಶ್ಯಾವಳಿಗಳು ಇದ್ದವು. ಅದು ಕೆ ಎಸ್ ಆರ್ ಟಿ ಸಿ ಯ ಕೆಂಪು ಬಣ್ಣದ ಬಸ್ ಆಗಿತ್ತು. ಕೆ ಎಸ್ ಆರ್ ಟಿ ಸಿ ಬಸ್ ಸಾಮಾನ್ಯವಾಗಿ ಕೆಂಪು ಬಣ್ಣದ್ದಾಗಿರುತ್ತದೆ ಎನ್ನುವುದು

ಸರಿ . ನಾನು ನೋಡಿದ್ದು ಕೆ ಎಸ್ ಆರ್ ಟಿ ಸಿ ಬಸ್ . ಆ ಬಸ್‌ನ ನಂಬರು ದೃಶ್ಯಾವಳಿಯಲ್ಲಿ ಕಂಡುಬರುತ್ತಿರಲಿಲ್ಲ.

36. ಪೊಲೀಸರು ತಿಳಿಸಿದ ಮೇರೆಗೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ. ನಾನು ವಾಸ್ತವಿಕತೆಗೆ ವಿರುದ್ಧವಾದ ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ. ಪಂಚನಾಮೆಗಳಿಗೆ ನಾನು ಸ್ಥಳದಲ್ಲಿ ರುಜು ಮಾಡಿಲ್ಲ ಬದಲಾಗಿ ಪೊಲೀಸ್ ಠಾಣೆಯಲ್ಲಿ ರುಜು ಮಾಡಿದ್ದೇನೆ ಎನ್ನುವ ಸೂಚನೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)